# 26-12-2019 ರ ಗ್ರಹಣದ ಅನುಷ್ಠಾನ


| | |
|---|---|
| **ಬುಧವಾರದ ಪೂಜೆ ಭೋಜನಗಳು** | **3** |
| **ಅಮಾವಾಸ್ಯಾ ಶ್ರಾದ್ಧ, ತರ್ಪಣ** | **6** |
| **ಪ್ರತಿಪದಾ ಶ್ರಾದ್ಧ** | **6** |
| **ಧನುರ್ಮಾಸದ ಆಚರಣೆ** | **7** |
| **ಗ್ರಹಣದ ಅನುಷ್ಠಾನಗಳು** | **8** |
| ಸ್ನಾನ | 9 |
| ಶ್ರಾದ್ಧ, ತರ್ಪಣ | 13 |
| ದಾನ | 15 |
| ಸಂಕಲ್ಪ ಸಮರ್ಪಣೆ | 16 |
| **ಈ ಎರಡು ತಿಂಗಳ ದುಷ್ಫಲಗಳು** | **17** |
| **ಪರಿಹಾರ** | **25** |
| **ಗ್ರಹಣದ ಶುಭಾಶುಭ ಫಲಗಳು** | **26** |
| **ಮೋದಿಯವರಿಗಾಗಿ ಪ್ರಾರ್ಥಿಸಿ** | **28** |
| **ಹೋಮ ಹವನಗಳ ಕುರಿತು** | **29** |
| **ಗ್ರಹಣದ ನಂತರ** | **32** |
| **ಗ್ರಹಣದ ಕುರಿತ ಲೇಖನಗಳ ಲಿಂಕ್** | **34** |

ವಿಕಾರಿ ಸಂವತ್ಸರದ ಮಾರ್ಗಶೀರ್ಷ ಕೃಷ್ಣ ಅಮಾವಾಸ್ಯೆ [ 26-12-2019] ಗುರುವಾರ ಬೆಳಿಗ್ಗೆ 08-04 ರಿಂದ 11-03 ರವರೆಗೆ ಸೂರ್ಯಗ್ರಹಣವಿದೆ. ಆ ದಿವಸ ಗ್ರಹಣ ಆರಂಭವಾಗುವದಕ್ಕಿಂತ ಮುಂಚೆ, ಗ್ರಹಣಕಾಲದಲ್ಲಿ ಮತ್ತು ಗ್ರಹಣದ ನಂತರ ಮಾಡಬೇಕಾದ ಎಲ್ಲ ಸತ್ಕರ್ಮಗಳ ವಿವರವನ್ನು ತಿಳಿಯೋಣ.

ಇಲ್ಲಿ ಬಳಸಲ್ಪಡುವ ವೇಧ, ಸ್ಪರ್ಶ, ಮೋಕ್ಷ ಮುಂತಾದ ವಿಷಯಗಳ ಕುರಿತು ಲೇಖನದಲ್ಲಿ ವಿಸ್ತಾರವಾಗಿ ತಿಳಿಸಿದ್ದೇನೆ. ಅವುಗಳ ಲಿಂಕು ಇಲ್ಲಿವೆ –

**ಗ್ರಹಣದ ಅನುಷ್ಠಾನಗಳು**

vishwanandini.com/fullarticle.php?serialnumber=VNA004

**ಅಶೌಚದಲ್ಲಿ ಗ್ರಹಣದ ಆಚರಣೆ**

vishwanandini.com/fullarticle.php?serialnumber=VNA271

## ಬುಧವಾರದ ಪೂಜೆ ಭೋಜನಗಳು

ಗುರುವಾರ ಬೆಳಿಗ್ಗೆ ಸೂರ್ಯಗ್ರಹಣ ಇದೆ. ಅದಕ್ಕಿಂತ ಮುಂಚೆ ವೇಧಕಾಲ. **ವೇಧಕಾಲದಲ್ಲಿ ಯಾವ ಪೂಜೆಯನ್ನೂ ಮಾಡಲು ಬರುವದಿಲ್ಲ.** ಸಂಧ್ಯಾವಂದನೆ ಮತ್ತು ಪಾರಾಯಣಕ್ಕಷ್ಟೇ ಅಧಿಕಾರ. ನಿರ್ಮಾಲ್ಯ ಪುಷ್ಪಗಳನ್ನು ವಿಸರ್ಜಿಸಿ ಒಮ್ಮೆ ಅಭಿಷೇಕ ಮಾಡಬೇಕು. ಆದರೆ ಆ ಅಭಿಷೇಕದ ತೀರ್ಥವನ್ನು ಸ್ವೀಕರಿಸಬಾರದು.

ಇನ್ನು ಭೋಜನ ವಿಷಯ.

ಸೂರ್ಯಗ್ರಹಣ ಯಾವ ಯಾಮದಲ್ಲಿ ಆರಂಭವಾಗುತ್ತದೆಯೋ ಅದಕ್ಕಿಂತ ನಾಲ್ಕು ಯಾಮಗಳ ಮೊದಲು ವೇಧ ಆರಂಭವಾಗುತ್ತದೆ ಎಂದು ಸ್ಮೃತಿಮುಕ್ತಾವಲಿಯಲ್ಲಿ ಶ್ರೀಕೃಷ್ಣಾಚಾರ್ಯರು ತಿಳಿಸಿದ್ದಾರೆ —

**“ಸೂರ್ಯಗ್ರಹೇ ತು ನಾಶ್ನೀಯಾತ್
ಪೂರ್ವಂ ಯಾಮಚತುಷ್ಟಯಮ್”**

ಒಂದು ಯಾಮ ಎಂದರೆ ಮೂರು ಗಂಟೆಗಳು. ಮೂರು ಯಾಮ ಎಂದರೆ ಒಂಭತ್ತು ಗಂಟೆಗಳು. ಗುರುವಾರ ಬೆಳಿಗ್ಗೆ 8-04 ಕ್ಕೆ ಗ್ರಹಣ ಆರಂಭವಾಗುತ್ತಿರುವದರಿಂದ ಅದಕ್ಕಿಂತ ಮುಂಚಿನ ಹನ್ನೆರಡು ಗಂಟೆಗಳು, ಅಂದರೆ ಬುಧವಾರ ರಾತ್ರಿ 8:04 ಕ್ಕೆ ವೇಧ ಆರಂಭವಾಗುತ್ತದೆ.

ಹೀಗಾಗಿ 25ನೆಯ ತಾರೀಕು, ಬುಧವಾರ 8:04 ರ ಒಳಗೆ ಭೋಜನವನ್ನು ಮುಗಿಸಬೇಕು. ಆ ನಂತರ ಗ್ರಹಣ ಮುಗಿಯುವವರೆಗೆ ಏನನ್ನೂ ಸ್ವೀಕರಿಸಬಾರದು.

ಸೂರ್ಯಗ್ರಹಣದಲ್ಲಿ ಅಶಕ್ತರಿಗೆ ಮೂರು ಯಾಮಗಳ ನಿಯಮ. ಅವರು ಬುಧವಾರ ರಾತ್ರಿ ಸಂಜೆ 11:03 ರವರೆಗೆ ಫಲಾಹಾರವನ್ನು ಮಾಡಬಹುದು.

ಅಷ್ಟು ಹೊತ್ತಿನ ವರೆಗೆ ತೆಗೆದುಕೊಳ್ಳಬಹುದು ಎಂದಷ್ಟೇ ಅಭಿಪ್ರಾಯ. ರಾತ್ರಿ ಹನ್ನೊಂದಕ್ಕೆ ತಿನ್ನಲೇಬೇಕು ಎಂದಲ್ಲ.

ಬಸುರಿಯರು, ಬಾಣಂತಿಯರು, ಹತ್ತು ವರ್ಷದ ಒಳಗಿನ ಮಕ್ಕಳು, ಎಂಭತ್ತು ವರ್ಷ ದಾಟಿದ ವೃದ್ಧರು, ವಯಸ್ಸಿನಲ್ಲಿದ್ದರೂ ಅನಾರೋಗ್ಯದಲ್ಲಿರುವವರು ಇವರೆಲ್ಲರೂ ಅಶಕ್ತರು. ರಾತ್ರಿ ಹತ್ತರೊಳಗೆ ತಿಂದು ಮಲಗುವದು ಒಳ್ಳೆಯದು.

ಬುಧವಾರ ರಾತ್ರಿ ಹೆಚ್ಚಿನ ಹೊತ್ತಿನವರೆಗೆ ಎದ್ದು ನಿದ್ರೆಯನ್ನು ಕೆಡಬೇಡಿ. ಗ್ರಹಣ ಕಾಲ ಸಾಧನೆಗೆ ಅತ್ಯಂತ ಶ್ರೇಷ್ಠವಾದದ್ದು. ಆ ಕಾಲದಲ್ಲಿ ಆಯಾಸವಾಗಿದ್ದರೆ, ನಿದ್ರೆ ಕಾಡಿಸಿದರೆ ಸಾಧನೆ ಮಾಡಲಾಗುವದಿಲ್ಲ. ಹೀಗಾಗಿ ಬುಧವಾರ ರಾತ್ರಿ ಚನ್ನಾಗಿ ನಿದ್ರೆ ಮಾಡತಕ್ಕದ್ದು.

## ಅಮಾವಾಸ್ಯಾ ಶ್ರಾದ್ಧ, ತರ್ಪಣ

25ನೆಯ ತಾರೀಕು ಬುಧವಾರವೇ ದರ್ಶವಿದೆ. ಹೀಗಾಗಿ ಅಮಾವಾಸ್ಯೆಯ ನಿಮಿತ್ತ ತರ್ಪಣ ನೀಡುವವರು ಬುಧವಾರ ತಿಲತರ್ಪಣವನ್ನು ನೀಡಿ ರಾತ್ರಿ ಫಲಾಹಾರ ಮಾಡಬೇಕು.

ಮಾರ್ಗಶೀರ್ಷ ಅಮಾವಾಸ್ಯೆಯಂದು ಮೃತರಾದವರ ಶ್ರಾದ್ಧವನ್ನು 25ನೇ ತಾರೀಕು ಬುಧವಾರದಂದು ಮಾಡಬೇಕು.  ಶ್ರಾದ್ಧ ತಿಲತರ್ಪಣ ಮಾಡದವರು ಬುಧವಾರ ರಾತ್ರಿ ಊಟವನ್ನು ಮಾಡಬಹುದು.

## ಪ್ರತಿಪದಾ ಶ್ರಾದ್ಧ

26/12/2019 ರಂದು ಅಮಾವಾಸ್ಯಾ ಮತ್ತು ಪ್ರತಿಪದಾ ಎರಡೂ ತಿಥಿಗಳಿವೆ.

ಪೌಷ ಶುಕ್ಲ ಪ್ರತಿಪದೆ ಮೃತರಾದವರ ಶ್ರಾದ್ಧವನ್ನು 26ನೇ ತಾರೀಕು ಗುರುವಾರ ಮಾಡಬೇಕು. ಗ್ರಹಣ ಮುಗಿದ ನಂತರ ಬೇಗನೇ ಸ್ನಾನ, ಪೂಜೆಗಳನ್ನು ಮುಗಿಸಿ ಶ್ರಾದ್ಧವನ್ನು ಮಾಡಬೇಕು.

## ಧನುರ್ಮಾಸದ ಆಚರಣೆ

ಧನುರ್ಮಾಸದಲ್ಲಿ ಪ್ರತೀದಿವಸ ಸೂರ್ಯೋದಯಕ್ಕಿಂತ ಪೂಜೆ ಮಾಡಬೇಕು, ಏಕಾದಶಿ ಹೊರತು ಪಡಿಸಿದ ಎಲ್ಲ ದಿವಸಗಳಲ್ಲಿ ಹುಗ್ಗಿಯ ನೈವೇದ್ಯ ಮಾಡಬೇಕು.

ಆದರೆ ಗುರುವಾರ ಅರುಣೋದಯ ಮತ್ತು ಸೂರ್ಯೋದಯ ಕಾಲದಲ್ಲಿ ವೇಧವಿರುತ್ತದೆ. ಹೀಗಾಗಿ ಆಗ ಪೂಜೆಯನ್ನು ಮಾಡಲು ಬರುವದಿಲ್ಲ. ಆದರೆ ಅರುಣೋದಯಕಾಲಕ್ಕೆ ಸ್ನಾನ ಸಂಧ್ಯಾವಂದನೆಯನ್ನು ಮಾಡಿ ನಿರ್ಮಾಲ್ಯವಿಸರ್ಜನೆಯನ್ನು ಮಾಡಬೇಕು.

ಗ್ರಹಣ ಮುಗಿದ ನಂತರ ಪೂಜೆ ಮಾಡಬೇಕು, ಹುಗ್ಗಿಯ ನೈವೇದ್ಯವನ್ನೂ ಮಾಡಬೇಕು.

ಧನುರ್ಮಾಸವಿದ್ದರೂ ಪೂಜೆ ಮಾಡದೇ ಇದ್ದರೆ ದೋಷವಿಲ್ಲ. ಕಾರಣ ಧನುರ್ಮಾಸದ ನಿಯಮ ಗ್ರಹಣದ ನಿಯಮ ದೊಡ್ಡದು. ಹೀಗಾಗಿ ಅರುಣೋದಯ ಪೂಜೆ ಮಾಡದೇ ಇರುವ ದೋಷವಿಲ್ಲ.

## ಗ್ರಹಣದ ಅನುಷ್ಠಾನಗಳು

ಗ್ರಹಣಕಾಲದಲ್ಲಿ ತಿನ್ನುವದು, ಕುಡಿಯುವದು, ಮಲಗುವದು, ಮೈಥುನ ಇವೆಲ್ಲವೂ ಅತೀ ಘೋರ ಪರಿಣಾಮವನ್ನು ಉಂಟು ಮಾಡುತ್ತವೆ. ಹೀಗಾಗಿ ಮೊದಲೇ ಎಚ್ಚರದಲ್ಲಿರತಕ್ಕದ್ದು.

ಗ್ರಹಣಕಾಲದಲ್ಲಿ ನಿದ್ರೆ ಮಾಡಿದಲ್ಲಿ ಬುದ್ಧಿಮಾಂದ್ಯ ಉಂಟಾಗುತ್ತದೆ.

ಗ್ರಹಣಕಾಲದಲ್ಲಿ ತಿಂದರೆ ಕುಡಿದರೆ ಅತಿಯಾದ ಅನಾರೋಗ್ಯವುಂಟಾಗುತ್ತದೆ.

ಗ್ರಹಣಕಾಲದಲ್ಲಿ ಮೈಥುನ ಆಚರಿಸಿದರೆ ಪರಿಹಾರವಾಗದ ರೋಗಗಳು ಬರುತ್ತವೆ, ಆ ಸಂದರ್ಭದಲ್ಲಿ ಗರ್ಭ ಧರಿಸಿದರೆ ಅಂಗವಿಕಲ ಮಕ್ಕಳು, ವಿಕಾರ ರೂಪದ, ವಿಕೃತ ಬುದ್ಧಿಯ ಮಕ್ಕಳು ಹುಟ್ಟುತ್ತಾರೆ. ಎಚ್ಚರವಿರಲಿ.

## ಸ್ನಾನ

ಗ್ರಹಣಕಾಲದಲ್ಲಿ ನದೀಸ್ನಾನ, ಸಮುದ್ರಸ್ನಾನ ಅತ್ಯಂತ ಶ್ರೇಷ್ಠ. ಸಾಧ್ಯವಾದಷ್ಟು ನದಿ-ಸಮುದ್ರಗಳಿಗೆ ತೆರಳಿ ಅನುಷ್ಠಾನ ಮಾಡಲು ಪ್ರಯತ್ನ ಪಡಬೇಕು.

ಬೆಳಿಗ್ಗೆ 8:04 ಕ್ಕೆ ಸೂರ್ಯನಿಗೆ ಗ್ರಹಣವಾಗುತ್ತದೆ. ಅತ್ತ ಗ್ರಹಣವಾಗುತ್ತಿರುವಂತೆ ನಾವು ಸ್ನಾನ ಮಾಡಬೇಕು.

**ಗ್ರಹಣ ಆರಂಭವಾಗಿ ಸ್ವಲ್ಪ ಹೊತ್ತಾದ ಬಳಿಕ ಸ್ನಾನ ಮಾಡಿದರಾಯಿತು ಎಂದು ಕೂಡಬೇಡಿ.** ಗ್ರಹಣ ಹಿಡಿಯುವದಕ್ಕಿಂತ ಮುಂಚೆ ಸ್ನಾನಕ್ಕೆ ಸಿದ್ಧರಾಗಿರಿ, ನದೀ-ಸಮುದ್ರಗಳಲ್ಲಿರಿ. ಅತ್ತ ಗ್ರಹಣವಾಗುತ್ತಿದ್ದಂತೆ ಇತ್ತ ಸ್ನಾನ ಮಾಡಿದರೆ ಇತರ ಸ್ನಾನಕ್ಕಿಂತ ಲಕ್ಷಪಟ್ಟು ಮಿಗಿಲಾದ ಪುಣ್ಯ ಬರುತ್ತದೆ ಎಂದು ವೇದವ್ಯಾಸದೇವರು ವ್ಯಾಸಸ್ಮೃತಿಯಲ್ಲಿ ತಿಳಿಸುತ್ತಾರೆ —

**ಸ್ನಾನಂ ಲಕ್ಷಗುಣಂ ಪ್ರೋಕ್ತಂ**
**ಸ್ಪರ್ಶಕಾಲೇ ಯದಾ ಭವೇತ್**

ಸ್ನಾನ ಮಾಡಿ ಒದ್ದೆ ಬಟ್ಟೆಯಲ್ಲಿ ಕೂಡಬೇಡಿ. ಮೂರು ಗಂಟೆಗಳ ಕಾಲದ ದೀರ್ಘಕಾಲದ ಗ್ರಹಣ ಇರುವದರಿಂದ ಒಣಗಿದ ಶುದ್ಧ ಬಟ್ಟೆಯನ್ನುಟ್ಟು ಜಪ ಪಾರಾಯಣಗಳನ್ನು ಮಾಡತಕ್ಕದ್ದು. ಹಗಲಿನ ಹೊತ್ತು ಗ್ರಹಣವಾಗುತ್ತಿರುವದರಿಂದ ಸ್ನಾನ ಮಾಡಿದ ತಕ್ಷಣ ಅದೇ ಬಟ್ಟೆಯನ್ನು ಒಣಗಿಹಾಕಿದರೂ ಅರ್ಧ ಮುಕ್ಕಾಲು ಗಂಟೆಯಲ್ಲಿ ಬಟ್ಟೆಗಳು ಒಣಗುತ್ತವೆ.

ಗ್ರಹಣ ಆರಂಭವಾಗುತ್ತಿದ್ದಂತೆ ಸ್ನಾನ. ಸ್ನಾನವಾದ ತಕ್ಷಣ ಗೋಪೀಚಂದನ ಮುದ್ರೆಗಳನ್ನು ಧರಿಸಿ ಒಣಗಿದ ಬಟ್ಟೆಯನ್ನುಟ್ಟು ಪಾರಾಯಣ ಆರಂಭಿಸಿ.

ರಾಯರ ಸ್ತೋತ್ರ, ವಾಯುಸ್ತುತಿ ವಿಷ್ಣುಸಹಸ್ರನಾಮಗಳ ಪಾರಾಯಣಕ್ಕೆ ಒಂದು ಗಂಟೆಯ ಸಮಯ ಬೇಕಾಗುತ್ತದೆ.

ಮುಖ್ಯವಾಗಿ ಗ್ರಹಣಕಾಲದಲ್ಲಿ ದಿಗಭಿಮಾನಿ ದೇವತೆಗಳ ಪ್ರಾರ್ಥನೆಯನ್ನು ಮಾಡಬೇಕು. ಆ ಮಂತ್ರಗಳು ಮತ್ತು ಅರ್ಥವನ್ನು ಕೆಳಗಿನ ಲೇಖನದಲ್ಲಿ ನೀಡಲಾಗಿದೆ.

## ಗ್ರಹಣಕಾಲದಲ್ಲಿ ದಿಗ್ದೇವತೆಗಳ ಪ್ರಾರ್ಥನೆ

**vishwanandini.com/fullarticle.php?serialnumber=VNA005**

ಗ್ರಹಣಕಾಲದಲ್ಲಿ ಪೂಜೆಯ ನಿಯಮವಿಲ್ಲ. ಆದರೆ, ಸಾಲಿಗ್ರಾಮಾದಿಗಳಿಗೆ ಅಭಿಷೇಕವನ್ನು ಮಾಡತಕ್ಕದ್ದು.

ಸಾಲಿಗ್ರಾಮ-ಪ್ರತಿಮೆಗಳಿಗೆ ಅಭಿಷೇಕ ಮಾಡಿ ಪೂರ್ಣವಾಗಿ ವರೆಸಿ ಇಡಬೇಕು.

ಗ್ರಹಣಕಾಲದಲ್ಲಿ ಸ್ಪರ್ಶ ಮಾಡಿದ ನೀರು, ವಸ್ತ್ರ ಯಾವುದೇ ಕಾರಣಕ್ಕೂ ಗ್ರಹಣದ ನಂತರದಲ್ಲಿ ಶುಚಿಯಲ್ಲ. ಹೀಗಾಗಿ ಪೂರ್ಣವಾಗಿ ವರೆಸಿ ಮತ್ತೆ ಗ್ರಹಣಾನಂತರ ಪೂಜೆಯನ್ನು ಮಾಡಬಹುದು.

ಧ್ಯಾನ ಮಾಡುವವರಿಗೆ ಅನುಕೂಲವಾಗಲಿ ಎಂದು ಶ್ರೀಮದಾಚಾರ್ಯರು ತಿಳಿಸಿದ ಕ್ರಮದಲ್ಲಿ ಧ್ಯಾನದ ನಿರೂಪಣೆ ಇರುವ ಉಪನ್ಯಾಸ ವಿಶ್ವನಂದಿನಿಯಲ್ಲಿ ಉಪಲಬ್ಧವಿದೆ. Link —

## ಮಧ್ವಶಾಸ್ತ್ರದ ಪ್ರಕಾರ ಧ್ಯಾನ ಮಾಡುವ ಕ್ರಮ

http://vishwanandini.com/fullupanyasa.php?serialnumber=VNU531

ಆ ನಂತರ ಭಾಗವತದಲ್ಲಿನ ವಿರಾಡ್ರೂಪದ ಚಿಂತನೆಯ ಪ್ರವಚನವನ್ನು ಆಲಿಸಿ. ದೇವರು ಸರ್ವವ್ಯಾಪಿ, ಸರ್ವನಿಯಾಮಕ ಎಂಬ ಚಿಂತನೆಗಳು ಮಹಾಫಲಪ್ರದವಾದದ್ದು.

## ವಿರಾಡ್ರೂಪದ ವರ್ಣನೆ

http://vishwanandini.com/fullupanyasa.php?serialnumber=VNU677

ಆ ಬಳಿಕ ಮನೆಯವರೆಲ್ಲ ಕೂಡಿ ದೇವರ ನಾಮಗಳನ್ನು ಹಾಡಿ.

## ಶ್ರಾದ್ಧ, ತರ್ಪಣ

ಆ ಬಳಿಕ ಅಧಿಕಾರ ಇರುವವರು ಸರ್ವಪಿತೃಗಳಿಗೂ ಎಳ್ಳಿನಿಂದ ತರ್ಪಣವನ್ನು ನೀಡಿ.

ಗ್ರಹಣಕಾಲದಲ್ಲಿ ನಿರ್ಮಾಲ್ಯತೀರ್ಥವನ್ನು ಮಾಡಿದ್ದಲ್ಲಿ ಆ ನಿರ್ಮಾಲ್ಯತೀರ್ಥದಿಂದಲೇ ತರ್ಪಣ ನೀಡಿ.

ಇಲ್ಲದಿದ್ದಲ್ಲಿ ನದಿಯ ನೀರಿನಿಂದ, ಅಥವಾ ಶುದ್ಧವಾದ ನೀರಿನಿಂದ ತರ್ಪಣ ನೀಡಿ.

ಗ್ರಹಣಕಾಲದಲ್ಲಿ ಮಾಡುವ ಶ್ರಾದ್ಧವನ್ನು ಶಾಸ್ತ್ರಗಳು ಅತ್ಯಂತ ಪ್ರಶಂಸೆ ಮಾಡುತ್ತವೆ. ಪಿತೃಗಳಿಗೆ ಅತ್ಯಂತ ಪ್ರಿಯಕರವಾಗುತ್ತದೆ.

ಗ್ರಹಣಕಾಲದಲ್ಲಿ ಅನ್ನದಿಂದ ಪಿಂಡಪ್ರದಾನ ಮಾಡಬಾರದು. ಗೋಧಿಯ ಹಿಟ್ಟಿನ ಪಿಂಡ, ಅಥವಾ ಬಂಗಾರದ ಕಡ್ಡಿಗಳನ್ನು ಪಿಂಡದ ಸ್ಥಾನದಲ್ಲಿಟ್ಟು ಶ್ರಾದ್ಧ ಮಾಡಬೇಕು. ಮಹಾಲಯದಲ್ಲಿ ಮಾಡುವಂತೆ ಸರ್ವಪಿತೃಗಳಿಗೂ

ಮಾಡಬೇಕು. ಕೇವಲ ತಂದೆ, ತಾಯಿಯರಿಗೆ ಮಾಡಬಾರದು.

ಇನ್ನು ಶ್ರಾದ್ಧ ಮಾಡಲು ಸಾಧ್ಯವಿಲ್ಲದವರು ಶ್ರಾದ್ಧದ ಬದಲಾಗಿ ಬೆಳ್ಳಿಯ ಯಾವುದಾದರೂ ವಸ್ತುವನ್ನು ಯೋಗ್ಯರಿಗೆ ದಾನ ಮಾಡಬಹುದು.

## ದಾನ

ಗ್ರಹಣ ಆರಂಭವಾಗುತ್ತಿದ್ದಂತೆ ದಾನ ಮಾಡಬೇಡಿ. ಗ್ರಹಣದ ಮಧ್ಯದಲ್ಲಿಯೂ ದಾನ ಮಾಡಬೇಡಿ. ಗ್ರಹಣ ಇನ್ನೇನು ಬಿಡುತ್ತದೆ ಎನ್ನುವಾಗ ದಾನವನ್ನು ಮಾಡಿ. ಗ್ರಹಣದ ಮೋಕ್ಷಕಾಲಕ್ಕೆ ಮಾಡುವ ದಾನ ಅನಂತ ಫಲವನ್ನು ನೀಡುತ್ತದೆ ಎಂದು ವ್ಯಾಸಸ್ಮೃತಿ ತಿಳಿಸುತ್ತದೆ —

**“ಮೋಕ್ಷಕಾಲೇ ಭವೇದ್ ದಾನಮನಂತಮ್”**

ದಾನ ಯಾವಾಗಲೂ ಯಥಾಶಕ್ತಿಯಾಗಿರಬೇಕು. ಶಕ್ತಿ ಮೀರಿಯೂ ದಾನ ಮಾಡಬಾರದು. ಜಿಪುಣತನವನ್ನೂ ತೋರಬಾರದು.

ಯಾವ ಪದಾರ್ಥವನ್ನು ಗ್ರಹಣಕಾಲದಲ್ಲಿ ಮುಟ್ಟಿದರೆ ಮತ್ತೆ ಉಪಯೋಗಿಸಲು ಸಾಧ್ಯವಿಲ್ಲವೋ ಅಂತಹ ಧಾನ್ಯ, ಹಾಲು ಮೊಸರು ಮುಂತಾದವನ್ನು ದಾನ ನೀಡತಕ್ಕದ್ದಲ್ಲ. ಧಾನ್ಯದ ದಾನ ನೀಡುವದಾದರೆ ಸಂಕಲ್ಪಿಸಿ ಮಾರನೆಯ ದಿವಸ ನೀಡತಕ್ಕದ್ದು. ಗ್ರಹಣ ಕಾಲದಲ್ಲಿ ಮುಟ್ಟಿ ನೀಡಬಾರದು.

ದೇವರು ಕೊಟ್ಟಷ್ಟು ಸೌಭಾಗ್ಯದಲ್ಲಿ ಹಣ, ಬೆಳ್ಳಿ ಮುಂತಾದವುಗಳ ರೂಪದಲ್ಲಿ ಯಥಾಶಕ್ತಿ ದಾನ ಮಾಡತಕ್ಕದ್ದು.

**ದಾನ ಸ್ವೀಕರಿಸಲು ಬ್ರಾಹ್ಮಣರಿಲ್ಲದೇ ಇದ್ದಲ್ಲಿ ಇಂತಹವರಿಗೆ ನೀಡುತ್ತೇನೆ ಎಂದು ಆ ಕಾಲದಲ್ಲಿಯೇ ಸಂಕಲ್ಪ ಮಾಡಿ, ಆ ನಂತರ ಅವರಿಗೆ ತಲುಪಿಸಿ.**

## ಸಂಕಲ್ಪ ಸಮರ್ಪಣೆ

ಗ್ರಹಣಕಾಲದ ಎಲ್ಲ ಸ್ನಾನ, ಜಪ, ದಾನಗಳಿಗೆ ಮಾಡಬೇಕಾದ ಸಂಕಲ್ಪ, ಸಮರ್ಪಣೆಗಳ ವಿಧಿಯನ್ನು ಕೆಳಗಿನ ಲೇಖನದಲ್ಲಿ ವಿವರಿಸಿದ್ದೇನೆ.

---

ಗ್ರಹಣದ ಸಂಕಲ್ಪ ಮತ್ತು ಸಮರ್ಪಣೆ

http://vishwanandini.com/fullarticle.php?serialnumber=VNA270

---

## ಈ ಎರಡು ತಿಂಗಳ ದುಷ್ಫಲಗಳು

ಈ ಬಾರಿಯ ಗ್ರಹಣ ಸಕಲರಿಗೂ ತೊಂದರೆಯನ್ನುಂಟು ಮಾಡುವಂತದ್ದು, ಮುಖ್ಯವಾಗಿ ಬ್ರಾಹ್ಮಣರಿಗೆ, ಅದರಲ್ಲಿಯೂ ವೃದ್ಧರಿಗೆ, ಗುರುಸ್ಥಾನದಲ್ಲಿರುವವರಿಗೆ ಅತಿ ಹೆಚ್ಚು ತೊಂದರೆಯುಂಟಾಗುತ್ತದೆ.

ಕಾರಣ, ಗ್ರಹಣ ನಡೆಯುತ್ತಿರುವ ರಾಶಿ ಧನೂರಾಶಿ. ಅದರ ಅಧಿಪತಿ ಗುರು ಅಸ್ತನಾಗಿದ್ದಾನೆ. ಗುರು ಬುದ್ಧಿ-ಧನ-ಪುತ್ರಕಾರಕ. ಜನರ ಬುದ್ಧಿ ಸ್ಥಿಮಿತದಲ್ಲಿರುವದಿಲ್ಲ. ಸಂಪತ್ತಿಗೆ ಹಾನಿಯುಂಟಾಗುತ್ತದೆ. ಮತ್ತು ಮಕ್ಕಳಿಗೆ ತೊಂದರೆಯಾಗುತ್ತದೆ.

ಮೊದಲೇ ಅಸ್ತನಾಗಿರುವ ಗುರುವನ್ನು, ಶನಿ, ಕೇತು, ಬುಧ, ರವಿ, ಚಂದ್ರ ಇಷ್ಟು ಜನ ಪೀಡಿಸುತ್ತಿದ್ದಾರೆ.

ಶನಿ ಜನವರಿ 20 ಮಕರ ರಾಶಿಯನ್ನು ಪ್ರವೇಶ ಮಾಡುವವರೆಗೆ ಈ ರೀತಿಯಾದ ತೊಂದರೆ ಇರುತ್ತದೆ.

ಆರೋಗ್ಯದಲ್ಲಿ ಏರುಪೇರಾಗುತ್ತದೆ. ಮನಸ್ಸಿನಲ್ಲಿ ವಿನಾಕಾರಣ ದುಗುಡ, ನಿಷ್ಕಾರಣವಾಗಿ ಜಗಳಗಳಾಗುತ್ತವೆ, ಹೊಡೆದಾಟಗಳಾಗುತ್ತವೆ. ಅಪಘಾತಗಳು ಹೆಚ್ಚಾಗುತ್ತವೆ.

ಹತ್ತು ರೂಪಾಯಿ ಖರ್ಚಾಗುವ ಕಡೆಗೆ ಮೂವತ್ತು ರೂಪಾಯಿ ಖರ್ಚಾಗುತ್ತದೆ. ಅದರಲ್ಲಿಯೂ ಮಕರ ರಾಶಿ ಮಕರ ಲಗ್ನದಲ್ಲಿ ಹುಟ್ಟಿದವರಿಗೆ ಖರ್ಚು ಅತ್ಯಧಿಕ.

**ಮೇಷ ರಾಶಿ ಮೇಷ ಲಗ್ನದಲ್ಲಿ ಹುಟ್ಟಿರುವವರಿಗೆ** ಕೂಡಿಟ್ಟಿರುವ ಹಣ, ಸಂಪತ್ತು ಕಳೆದುಕೊಳ್ಳುವ ಸಾಧ್ಯತೆ ಇರುತ್ತದೆ. ಹೀಗಾಗಿ ಈ ಡಿಸೆಂಬರ್ ಜನವರಿಗಳಲ್ಲಿ ಯಾವುದೇ ರೀತಿಯ ಸಾಲ ಮಾಡಬೇಡಿ, ಸಾಲ ನೀಡಬೇಡಿ, ಸಾಲಕ್ಕೆ ಗ್ಯಾರಂಟಿ ಕೊಡಬೇಡಿ. ನಿಮ್ಮ ಹಿರಿಯರ ಆರೋಗ್ಯದ ಬಗ್ಗೆ ಗಮನ ಕೊಡಿ.

**ವೃಷಭರಾಶಿ ಅಥವಾ ವೃಷಭ ಲಗ್ನದಲ್ಲಿ ಹುಟ್ಟಿರುವವರಿಗೆ** ದೇಹಕ್ಕೆ ತೊಂದರೆಯಾಗುವ ಸಾಧ್ಯತೆ ಹೆಚ್ಚಿದೆ. ಅದರಲ್ಲಿಯೂ ಮೂಳೆಗೆ

ಪೆಟ್ಟಾಗುತ್ತದೆ. ನೀವು ಈ ಎರಡು ತಿಂಗಳು ದೂರ ಪ್ರಯಾಣ ಮಾಡಲೇಬೇಡಿ. ಕಷ್ಟದ ಕೆಲಸಗಳನ್ನು ಮಾಡುವದು, ಈಜು, ಬೆಟ್ಟ ಹತ್ತುವದನ್ನು ಸರ್ವಥಾ ಮಾಡಬೇಡಿ.

**ಮಿಥುನ ರಾಶಿ ಅಥವಾ ಮಿಥುನ ಲಗ್ನದಲ್ಲಿ ಹುಟ್ಟಿರುವವರಿಗೆ** ಅತ್ಯಧಿಕವಾದ ಕೌಟುಂಬಿಕ ಕಲಹಗಳು ಕಾಣಿಸಿಕೊಳ್ಳುತ್ತವೆ. ಮಾತು ಪೂರ್ಣ ಕಡಿಮೆ ಮಾಡಿ, ಜಗಳ ಬೆಳೆಸಲು ಹೋಗಬೇಡಿ. ಈಗಾಗುವ ಜಗಳಗಳಿಂದ ಮನೆಯೇ ಮುರಿಯುತ್ತದೆ. ಗಂಡ ಹೆಂಡತಿಯರ ಮಧ್ಯದಲ್ಲಿ ವಿರಸವಾಗುತ್ತದೆ. ನಿಮ್ಮ ಸಂಗಾತಿಯ ಆರೋಗ್ಯ ಕೆಡುವ ದಟ್ಟ ಸಾಧ್ಯತೆಯಿದೆ.

**ಕರ್ಕ ರಾಶಿ ಅಥವಾ  ಕರ್ಕ ಲಗ್ನದಲ್ಲಿ ಹುಟ್ಟಿರುವವರಿಗೆ** ವಿಪರೀತ ಸಾಲವಾಗುತ್ತದೆ. ಸಾಲದ ಯೋಚನಯನ್ನೂ ಮಾಡಬೇಡಿ. ಎಷ್ಟು ಅನಿವಾರ್ಯವಾದರೂ ಸಾಲ ತೆಗೆದುಕೊಳ್ಳಬೇಡಿ. ಋಣಮೋಚನ ಸ್ತೋತ್ರವನ್ನು ಪಠಿಸಿ.

ನಿಮ್ಮ ಮೇಲೆ ಮಾಟ ಮಂತ್ರಗಳ ಪ್ರಯೋಗವಾಗುವ ಅತ್ಯಧಿಕ ಸಾಧ್ಯತೆಯಿದೆ. ನರಸಿಂಹ-ಮುಖ್ಯಪ್ರಾಣ-ರುದ್ರದೇವರ ಸ್ತೋತ್ರಗಳನ್ನು ಪಠಿಸಿ.
 ಸಿಂಹರಾಶಿಯಲ್ಲಿ ಅಥವಾ ಸಿಂಹಲಗ್ನದಲ್ಲಿ ಹುಟ್ಟಿದವರಿಗೆ ವಿದ್ಯೆಯಲ್ಲಿ ಹಿನ್ನಡೆ ಉಂಟಾಗುತ್ತದೆ. ಈ ಸಂದರ್ಭದಲ್ಲಿ ಹೊಸ ವಿದ್ಯೆಯನ್ನು ಆರಂಭಿಸಬೇಡಿ. ನಿಮ್ಮ ಮಕ್ಕಳಿಗೆ ಏಟಾಗುವ, ಆರೋಗ್ಯ ಕೆಡುವ ಸಾಧ್ಯತೆ ದಟ್ಟವಾಗಿದೆ.

ಕನ್ಯಾರಾಶಿ ಅಥವಾ ಕನ್ಯಾಲಗ್ನದಲ್ಲಿ ಹುಟ್ಟಿದವರ ವಾಹನಗಳು ಕೆಡುತ್ತವೆ. ವಾಹನಗಳಿಂದ ತೊಂದರೆಯಾಗುತ್ತದೆ. ನೀವೂ ಸಹ ಸುತರಾಂ ದೂರಪ್ರಯಾಣ ಮಾಡುವಂತಿಲ್ಲ. ಒಬ್ಬೊಬ್ಬರೇ ಪ್ರಯಾಣ ಮಾಡಬೇಡಿ. ನಿಮ್ಮ ಆಸ್ತಿಗೆ ಸಂಬಂಧಿಸಿದಂತೆ ತಕರಾರುಗಳು ಆಗುವ ಸಾಧ್ಯತೆ ಇರುತ್ತದೆ. ಭೂಮಿಗೆ ಸಂಬಂಧಿಸಿದ ಯಾವ ಕಾರ್ಯಗಳನ್ನೂ ಸರ್ವಥಾ ಮಾಡಬೇಡಿ. ನಿಮ್ಮ ಹಿರಿಯರ, ಮುಖ್ಯವಾಗಿ ತಾಯಿಯ ಆರೋಗ್ಯ ಕೆಡುವ ದಟ್ಟ ಸಾಧ್ಯತೆಗಳಿವೆ. ನಿಮಗೆ ಯಾರಾದರೂ ಉಚಿತವಾಗಿ ಆಸ್ತಿ ನೀಡುತ್ತೇನೆ

ಎಂದರೂ ಈ ಡಿಸೆಂಬರ್, ಜನವರಿ ತಿಂಗಳಲ್ಲಿ ತೆಗೆದುಕೊಳ್ಳಬೇಡಿ. ಅದರಿಂದ ಮುಂದೆ ತೊಂದರೆಯಾಗುತ್ತದೆ.

ತುಲಾರಾಶಿ ತುಲಾಲಗ್ನದಲ್ಲಿ ಹುಟ್ಟಿದವರಿಗೆ ಗಂಟಲು, ಕಿವಿಗಳಲ್ಲಿ ಅನಾರೋಗ್ಯ ಉಂಟಾಗುತ್ತದೆ. ತಂದೆ ತಾಯಿಯರನ್ನು ಕಳೆದುಕೊಳ್ಳುವ ಪರಿಸ್ಥಿತಿ ಎದುರಾಗಬಹುದು. ನಿಮ್ಮ ಕೈಕೆಳಗೆ ಕೆಲಸ ಮಾಡುವ, ನಿಮ್ಮ ಸಹೋದರ ಸಹೋದರಿಯರ ಅರೋಗ್ಯ ಮತ್ತು ಹಣಕಾಸು ಪರಿಸ್ಥಿತಿ ಕೆಡುವ ಸಾಧ್ಯತೆ ಇದೆ. ನೀವೇ ನಿಮ್ಮ ಸಹೋದರ ಸಹೋದರಿಯರಿಗೆ ತೊಂದರೆ ಕೊಡುತ್ತೀರಿ. ಖಿನ್ನತೆಗೆ ಒಳಗಾಗುವ ಸಾಧ್ಯತೆಯಿದೆ.

ವೃಶ್ಚಿಕ ರಾಶಿ ಅಥವಾ ವೃಶ್ಚಿಕ ಲಗ್ನದಲ್ಲಿ ಹುಟ್ಟಿದವರಿಗೆ ಮನೆಯಲ್ಲಿ ಕಲಹಗಳಾಗುತ್ತವೆ. ಸಂಬಂಧಗಳಲ್ಲಿ ಬಿರುಕುಂಟಾಗುತ್ತವೆ. ಆಸ್ತಿಗೆ ಸಂಬಂಧಸಿದ ವಿಷಯಗಳಲ್ಲಿ ತಕರಾರು ಉಂಟಾಗುತ್ತವೆ. ಆರೋಗ್ಯ ಕೆಡುತ್ತದೆ. ಹಣಕಾಸಿನ ತೀವ್ರ ಬಿಕ್ಕಟ್ಟು ಉಂಟಾಗುತ್ತದೆ. ನಿಮ್ಮ ಮೇಲಧಿಕಾರಿಗಳಿಂದ ತೊಂದರೆಯಾಗುತ್ತದೆ.

ನಿಮ್ಮ ಕೋಪದ ಒಂದೊಂದು ಮಾತಿಗೂ, ಒಂದೊಂದು ನಡೆಗೂ ತುಂಬ ದೊಡ್ಡ ಬೆಲೆ ತೆರಬೇಕಾಗುತ್ತದೆ, ನೆನಪಿರಲಿ, ಮಾತಿನಲ್ಲಿ ಹಿಡಿತವಿರಲಿ. ಸುಮ್ಮಸುಮ್ಮನೆ ಜಗಳಗಳಾಗುವ ಸಾಧ್ಯತೆಯಿದೆ. ಸಂಬಂಧ ಮತ್ತು ವ್ಯವಹಾರಗಳಲ್ಲಿ ಮೋಸ ಹೋಗುವ ಸಾಧ್ಯತೆ ಹೆಚ್ಚು.

ಮಕರ ರಾಶಿ ಮತ್ತು ಮಕರ ಲಗ್ನದಲ್ಲಿ ಹುಟ್ಟಿರುವವರು ವಿನಾಕಾರಣ ಅತ್ಯಧಿಕ ಖರ್ಚು ಮಾಡುತ್ತೀರಿ. ಅನಿವಾರ್ಯವಾಗಿ ಸಾಲವಾಗುತ್ತದೆ. ಯಾವುದನ್ನೂ ಕೊಂಡುಕೊಳ್ಳಬೇಡಿ, ಯಾವುದನ್ನೂ ಮಾರಬೇಡಿ. ಹಣಕಾಸಿನ ಬಿಕ್ಕಟ್ಟು ಅತ್ಯಧಿಕವಾಗುತ್ತದೆ.

ಕುಂಭರಾಶಿ ಮತ್ತು ಕುಂಭಲಗ್ನದಲ್ಲಿ ಹುಟ್ಟಿದವರ ಕೆಲಸಕ್ಕೆ ಮತ್ತು ಆದಾಯದ ಮೂಲಗಳಿಗೆ ತೊಂದರೆಯಾಗುವ ಸಾಧ್ಯತೆಯಿದೆ. ಅಪಾರ ಲಾಭ ತಂದು ಕೊಂಡುವ ಹತ್ತಾರು ಅವಕಾಶಗಳು ಈ ಕಾಲದಲ್ಲಿ ನಿಮ್ಮನ್ನು ಹುಡುಕಿಕೊಂಡು ಬರುತ್ತವೆ. ಆದರೆ ತಪ್ಪಿಯೂ ಈ ಸಂದರ್ಭದಲ್ಲಿ ಯಾವ ಹೂಡಿಕೆಯನ್ನೂ ಮಾಡಬೇಡಿ. ಆದರೆ, ಕೆಟ್ಟ

ಸುದ್ದಿಗಳನ್ನು ತುಂಬ ಕೇಳುತ್ತೀರಿ. ಅಪಾರ ಪ್ರಮಾಣದ ನಷ್ಟವುಂಟಾಗುವ ಸಾಧ್ಯತೆಯಿದೆ. ವಿಪರೀತ ಅಲೆದಾಡುವ ಪರಿಸ್ಥಿತಿ. ಆದರೆ ಪ್ರಯಾಣದಿಂದಲೇ ತೊಂದರೆಯಾಗುತ್ತದೆ.

ಧನೂರಾಶಿ ಅಥವಾ ಧನುರ್ಲಗ್ನದಲ್ಲಿ ಹುಟ್ಟಿರುವವರಿಗೆ

ಮತ್ತು ಮೀನರಾಶಿ ಹಾಗೂ ಮೀನಲಗ್ನದಲ್ಲಿ ಹುಟ್ಟಿದವರಿಗೆ

ಎಲ್ಲ ರಾಶಿಗಳಿಗಿಂತಲೂ ಅತ್ಯಧಿಕವಾಗಿ ಎಲ್ಲ ತರಹದ ತೊಂದರೆಗಳೂ ಉಂಟಾಗುತ್ತವೆ. ಯಾವುದೇ ರೀತಿಯ ನಿರ್ಧಾರ, ಪ್ರಯಾಣ, ಜಗಳ, ಸಾಲ ಯಾವುದನ್ನೂ ಮಾಡಬೇಡಿ. ಧನೂರಾಶಿಯಲ್ಲಿ ಹುಟ್ಟಿದ ಮಕ್ಕಳನ್ನು ಈ ಎರಡು ತಿಂಗಳು ಒಬ್ಬೊಬ್ಬರನ್ನೇ ಬಿಡಬೇಡಿ. ಯಾವಾಗಲೂ ಜೊತೆಯಲ್ಲಿರಿ. ಸಾಧ್ಯವಾದಷ್ಟೂ ಮನೆಯಲ್ಲಿಯೇ ಇರಿ. ಇರುವ ಊರನ್ನು ಬಿಟ್ಟು ಎಲ್ಲಿಗೂ ಹೋಗಬೇಡಿ. ಒಂದು ರಾತ್ರಿ, ಒಂದು ಹಗಲಿನ ಪ್ರಯಾಣವೂ ಬೇಡ.

ಒಟ್ಟಾರೆ ಹನ್ನೆರಡು ರಾಶಿಯವರಿಗೂ ಡಿಸೆಂಬರ್ ಮತ್ತು ಜನವರಿ ತಿಂಗಳು ಸಮಸ್ಯೆಗಳಿಂದ ತುಂಬಿವೆ. ಇಡಿಯ ದೇಶದಲ್ಲಿಯೇ ಹಿಂಸಾಚಾರದ ವಾತಾವರಣ ಆರಂಭವಾಗಿದೆ.

ಡಿಸೆಂಬರ್ 23 ರಿಂದ ಜನವರಿ 20 ರ ವರೆಗೆ ಯಾವುದೇ ರೀತಿಯ ಆಪರೇಶನ್ ಗಳು ಬೇಡ. ಅನಿವಾರ್ಯವಾದರೆ ಶ್ರೀಹರಿ ವಾಯು ದೇವತಾ ಗುರುಗಳನ್ನು ಪ್ರಾರ್ಥಿಸಿ ಮುಂದುವರೆಯಿರಿ.

ಈ ಅವಧಿಯಲ್ಲಿ ಯಾವುದೇ ಮದುವೆಯ ನಿರ್ಧಾರ ಮಾತುಕತೆ ಬೇಡ.

ಹೊಸ ವಾಹನ, ಹೊಸ ಆಸ್ತಿ, ಹೊಸ ವಸ್ತುಗಳ ಖರೀದಿ ಬೇಡ.

ಭೂಮಿಪೂಜೆ, ಪಾಯಕಟ್ಟುವದು, ಮನೆಗೆ ಗೃಹಬಾಗಿಲನ್ನಿಡುವದು ಇತ್ಯಾದಿ ಕಾರ್ಯಗಳನ್ನು ಮಾಡಬೇಡಿ. ನಡೆಯುತ್ತಿರುವ ಕಾರ್ಯ ಮುಂದುವರೆಯಲಿ ಅಷ್ಟೆ.

ನಿತ್ಯದ ಕೆಲಸಕ್ಕೆ ಹೋಗಿ ಬರುವ ಪ್ರಯಾಣ ಅಷ್ಟೇ ಇರಲಿ. ಅದೂ ಸಹಿತ ಹೊರಡುವ ಮುನ್ನ ಮುಖ್ಯಪ್ರಾಣ, ದುರ್ಗಾ, ನರಸಿಂಹರ ಸ್ಮರಣೆ ಮಾಡಿ ಹೊರಡಿ. ದೂರದ ಪ್ರಯಾಣಗಳನ್ನು ಆದಷ್ಟು ತಡೆಯಿರಿ. ಹೋಗುವ ಪ್ರಸಕ್ತಿ ಬಂದರೆ ಹರಿಗುರುಗಳ ಸ್ಮರಣೆಯನ್ನು ಮಾಡಿ ಹೊರಡಿ.

## ಪರಿಹಾರ

ಪ್ರತೀನಿತ್ಯ ಸಾಲಿಗ್ರಾಮ ಪೂಜೆ, ವಿಷ್ಣುಸಹಸ್ರನಾಮ ಪಾರಾಯಣ, ನಮಸ್ಕಾರಗಳನ್ನು ತಪ್ಪದೇ ಮಾಡಿ.

ಶ್ರೀನರಸಿಂಹದೇವರ, ದುರ್ಗಾದೇವಿಯರ, ಮುಖ್ಯಪ್ರಾಣದೇವರ, ರುದ್ರದೇವರ, ನವಗ್ರಹಗಳ, ಗುರುಗಳ ಸ್ತೋತ್ರಗಳನ್ನು ಪಠಣ ಮಾಡಿ.

ನಿತ್ಯ ಅಧ್ಯಯನಶೀಲರಾದ ಮತ್ತು ಗಾಯತ್ರೀಜಪಶೀಲರಾದ ಬ್ರಾಹ್ಮಣರಿಗೆ ಕಬ್ಬಿಣದ ವಸ್ತುಗಳನ್ನು ದಾನ ಮಾಡುವದರಿಂದ ಹಾಗೂ ಸಮೃದ್ಧವಾಗಿ ಅನ್ನದಾನ ಮಾಡುವದರಿಂದ ಈ ದುಷ್ಫಲಗಳು ಪರಿಹಾರವಾಗುತ್ತವೆ.

## ಗ್ರಹಣದ ಶುಭಾಶುಭ ಫಲಗಳು

ಮೇಲೆ ಹೇಳಿದ ಅಶುಭ ಫಲಗಳು ಧನೂರಾಶಿಯಲ್ಲಿ ಉಂಟಾಗುತ್ತಿರುವ ಗ್ರಹಣ ಮತ್ತು ಷಡ್-ಗ್ರಹಯೋಗದ ಕುರಿತಾದದ್ದು.

ಈಗ ಕೇವಲ ಗ್ರಹಣದಿಂದ ಉಂಟಾಗುವ ಶುಭ-ಅಶುಭ ಫಲಗಳನ್ನು ತಿಳಿಯೋಣ.

ತುಲಾ, ಕುಂಭ, ಕರ್ಕ ಮತ್ತು ಮೀನ ರಾಶಿಗಳಲ್ಲಿ ಜನಿಸಿದವರಿಗೆ ಶುಭ ಫಲಗಳುಂಟಾಗುತ್ತವೆ.

ಸಿಂಹ, ಮೇಷ, ಮಿಥುನ, ವೃಶ್ಚಿಕ ರಾಶಿಯಲ್ಲಿ ಹುಟ್ಟಿದವರಿಗೆ ಶುಭ ಮತ್ತು ಅಶುಭ ಫಲಗಳನ್ನು ಪಡೆಯುತ್ತಾರೆ.
ಕನ್ಯಾ ಮತ್ತು ಮಕರರಾಶಿಗಳಲ್ಲಿ ಜನಿಸಿದವರು
ಧನೂರಾಶಿಯಲ್ಲಿ ಜನಿಸಿದವರು
ಮೂಲ ನಕ್ಷತ್ರದಲ್ಲಿ ಹುಟ್ಟಿದವರು,
ಕ್ರಮವಾಗಿ ಹೆಚ್ಚೆಚ್ಚು ಅಶುಭಫಲವನ್ನು ಪಡೆಯುತ್ತಾರೆ.

ದೋಷ ಪರಿಹಾರಕ್ಕಾಗಿ ವಿಶೇಷ ಜಪ, ಪಾರಾಯಣ ಮತ್ತು ದಾನಗಳನ್ನು ಮಾಡಿ.

ಉಪದೇಶ ಪಡೆದಿರುವ ಪುರುಷರು ಮನ್ಯುಸೂಕ್ತ, ವಾಯುಸ್ತುತಿ, ರುದ್ರಪ್ರಶ್ನದ ಪಾರಾಯಣಗಳನ್ನು ಮಾಡಿ.

ಎಲ್ಲರೂ ವಿಷ್ಣುಸಹಸ್ರನಾಮ, ನರಸಿಂಹ ಸ್ತೋತ್ರಗಳು, ಮಧ್ವನಾಮ, ಶಿವಸ್ತುತಿಗಳು, ನವಗ್ರಹಸ್ತೋತ್ರ ಮತ್ತು ಗುರುಗಳ ಸ್ತೋತ್ರಗಳು, ಮುಖ್ಯವಾಗಿ ರಾಯರ ಸ್ತೋತ್ರವನ್ನು ಪಾರಾಯಣ ಮಾಡಿ.  ಯಾವ ಸ್ತೋತ್ರ ಬರಲಿ, ಬಾರದಿರಲಿ

**ಶ್ರೀರಾಘವೇಂದ್ರತೀರ್ಥಗುರ್ವಂತರ್ಗತ**
**ಸಮಸ್ತ ದೇವತಾಂತರ್ಗತ**
**ಭಾರತೀರಮಣಮುಖ್ಯಪ್ರಾಣಾಂತರ್ಗತ**
**ಶ್ರೀಲಕ್ಷ್ಮೀನೃಸಿಂಹಾಯ ನಮಃ**

ಇಷ್ಟನ್ನು ನಿರಂತರವಾಗಿ ಗ್ರಹಣಕಾಲದಲ್ಲಿ ಪಠಣ ಮಾಡಿ.

ಬೆಳ್ಳಿ ಮತ್ತು ಬಂಗಾರದ ವಸ್ತುಗಳನ್ನು ದಾನ ಮಾಡಿ.

ಎಷ್ಟು ಸಾಧ್ಯವೋ ಅಷ್ಟು ನಮಸ್ಕಾರಗಳನ್ನು ಭಗವಂತನಿಗೆ, ದೇವತೆಗಳಿಗೆ, ಗುರುಗಳಿಗೆ ಸಮರ್ಪಿಸಿ.

## ಮೋದಿಯವರಿಗಾಗಿ ಪ್ರಾರ್ಥಿಸಿ

ನರೇಂದ್ರ ಮೋದಿ ಮತ್ತು ಅವರ ತಂಡ ಭಾರತೀಯರಿಗೆ ದೊರೆತಿರುವ ಭಾಗ್ಯಗಳಲ್ಲಿ ಒಂದು. ಇಡಿಯ ದುಷ್ಟಶಕ್ತಿಗಳನ್ನು ಎದುರು ಹಾಕಿಕೊಂಡು, ಅತ್ಯಂತ ಸೂಕ್ಷ್ಮಬುದ್ಧಿಯಿಂದ ಆಲೋಚಿಸಿ, ಭಾರತದ ಸರ್ವಾಂಗೀಣ ಏಳಿಗೆಗಾಗಿ ಶ್ರಮಿಸುತ್ತಿರುವ ಪ್ರಾಮಾಣಿಕ ವ್ಯಕ್ತಿಗಳು.

ಮೋದಿಯವರಿಗೆ ಮತ್ತು ಅವರ ಜೊತೆಯಲ್ಲಿರುವ ಸಮಗ್ರ ಸಜ್ಜನರಿಗೆ ಯಾವ ರೀತಿಯ ತೊಂದರೆಯಾಗದಿರಲಿ, ನಮ್ಮ ದೇಶದ ಸರ್ವಾಂಗೀಣ ಅಭಿವೃದ್ಧಿಯಾಗಲಿ ಎಂದು ದೇವರನ್ನು ಪ್ರಾರ್ಥಿಸುವದನ್ನು ಮರೆಯಬೇಡಿ. ಮರತರೆ ಅದು ನಮಗೆ ನಾವು ಮಾಡಿಕೊಳ್ಳುವ ದ್ರೋಹ. ಅವರನ್ನು ಉಳಿಸಿಕೊಳ್ಳಬೇಕಾದ್ದು ನಮ್ಮ ಕರ್ತವ್ಯ.

## ಹೋಮ ಹವನಗಳ ಕುರಿತು

ಇತ್ತೀಚಿಗೆ ಹೋಮ ಶಾಂತಿಗಳೇನೋ ಅತ್ಯಧಿಕವಾಗಿ ನಡೆಯುತ್ತವೆ. ಗ್ರಹಣಕಾಲದಲ್ಲಂತೂ ಸಾಮೂಹಿಕವಾಗಿ ಅವುಗಳ ಆಚರಣೆ ನಡೆಯುತ್ತದೆ. ಆದರೆ ಸಂತೋಷ ಪಡುವ ವಿಷಯವಲ್ಲ.

ಕಾರಣ, ಮೊದಲಿಗೆ ಹೋಮಗಳನ್ನು ಕಬ್ಬಿಣದ ಕುಂಡಗಳಲ್ಲಿ ಮಾಡುತ್ತಾರೆ. ಅಂಗಡಿಯಿಂದ ತಂದ ತುಪ್ಪ, ಶುದ್ಧವಾಗಿ ತಯಾರಾಗದ ಪದಾರ್ಥಗಳಿಂದ ಹೋಮ ಮಾಡುತ್ತಾರೆ.

ಮಂತ್ರಗಳು ಪಾರಂಪರಿಕ ಗುರುಗಳಿಂದ ಉಪದೇಶವಾಗಿರಬೇಕು, ಅವನ್ನು ನಿತ್ಯ ಪಾರಾಯಣ ಮಾಡುತ್ತ ಸಿದ್ಧಿ ಗಳಿಸಿರಬೇಕು, ಉಚ್ಚಾರಣೆಯಲ್ಲಿ ಕಿಂಚಿತ್ತೂ ತಪ್ಪಾಗಬಾರದು, ಅರ್ಥ ತಿಳಿದಿರಬೇಕು. ಇವು ಎಷ್ಟರ ಮಟ್ಟಿಗೆ ಯಜಮಾನ ಮತ್ತು ಪುರೋಹಿತರಲ್ಲಿ ಇರುತ್ತದೆ ಎನ್ನುವದು ನಮಗೆ ನಾವೇ ಪ್ರಶ್ನೆ ಮಾಡಿಕೊಂಡು ಉತ್ತರ ಪಡೆಯಬೇಕು.

ಶಾಸ್ತ್ರ ಹೇಳುವ ಕ್ರಮದಲ್ಲಿ ಹೋಮ ಮುತಾದವುಗಳನ್ನು ಮಾಡಿದಾಗ ಮಾತ್ರ ಭಗವಂತನಿಗೆ ಪ್ರಿಯವಾಗುತ್ತದೆ. ಇಲ್ಲದಿದ್ದರೆ ಆ ಎಲ್ಲ ಕ್ರಿಯೆಗಳನ್ನು ದೈತ್ಯರು ಸ್ವೀಕರಿಸಿ, ಅದು ದೈತ್ಯಾರಾಧನೆಯಾಗುತ್ತದೆ.

ನಮ್ಮಂತಹವರಿಗಾಗಿಯೇ ವೇದಗಳಲ್ಲೊಂದು ಪ್ರಾರ್ಥನೆಯಿದೆ — **“ದೇವರಿಗೆ ಪ್ರಿಯವಾಗುವ ರೀತಿಯಲ್ಲಿ ಕರ್ಮ ನಡೆಯುವದಾದರೆ ಮಾತ್ರ, ಓ ದೇವತೆಗಳೇ ನಮ್ಮಿಂದ ಕರ್ಮ ಮಾಡಿಸಿ, ಇಲ್ಲದಿದ್ದಲ್ಲಿ ನಮ್ಮಿಂದ ಸ್ತೋತ್ರವನ್ನು ಮಾಡಿಸಿ ಆ ಸ್ತೋತ್ರವನ್ನು ಸ್ವೀಕರಿಸಿ”** ಎಂದು.

ಅಶುದ್ಧವಾದ ಕ್ರಮದಲ್ಲಿ ಮಾಡುವ ಯಾವುದೇ ಕ್ರಿಯೆಯನ್ನು ಮಾಡಬಾರದು.

ನಾವು ಮಾಡುವ ಯಾವುದೇ ಕ್ರಿಯೆ ಶಾಸ್ತ್ರಸಮ್ಮತವಾಗಿದ್ದರೆ ಮಾತ್ರ ಅದು ಸಾತ್ವಿಕ ಕ್ರಿಯಯಾಗುತ್ತದೆ, ಶ್ರೀಹರಿಗೆ ಸೇರುತ್ತದೆ.

ಶಾಸ್ತ್ರಕ್ಕೆ ಅಸಮ್ಮತವಾದ ರೀತಿಯಲ್ಲಿ ಅಥವಾ ಶಾಸ್ತ್ರನಿಷಿದ್ಧವಾದ ರೀತಿಯಲ್ಲಿ ಮಾಡುವ

ಕ್ರಿಯೆಗಳು ದೈತ್ಯಾರಾಧನೆಯಾಗುತ್ತವೆ. ಅದರಿಂದ ಮಹತ್ತರ ದುಷ್ಫಲಗಳುಂಟಾಗುತ್ತವೆ.

ಹೀಗಾಗಿ ನಾವು ಮಾಡುವ ಕ್ರಿಯೆ ಮಾಡುವ ದೈತ್ಯಾರಾಧನೆ ಆಗದಂತೆ ನೋಡಿಕೊಳ್ಳುವದು ನಮ್ಮ ಕರ್ತವ್ಯ.

ಹಾಗಾದರೆ ನಮ್ಮ ಕರ್ಮವನ್ನು ಕಳೆದುಕೊಳ್ಳುವ ಬಗೆ ಹೇಗೆ?  ಸರಳವಾದ ಮಾರ್ಗವಿದೆ — ನಾವು ಮಾಡುವ ಸ್ತೋತ್ರಗಳಿಂದ, ನಮಸ್ಕಾರಗಳಿಂದಲೇ ಎಲ್ಲ ಫಲಗಳನ್ನೂ ಪಡೆಯಬಹುದು.

ಭಕ್ತಿಯಿಂದ ಮಾಡುವ ಸ್ತೋತ್ರ, ನಮಸ್ಕಾರಗಳು ನೀಡುವಷ್ಟು ಫಲವನ್ನು ಇನ್ನ್ಯಾವ ಹೋಮ, ಯಜ್ಞಗಳೂ ನೀಡಲು ಸಾಧ್ಯವಿಲ್ಲ.

## ಗ್ರಹಣದ ನಂತರ

ಗ್ರಹಣ ಮುಗಿದದ್ದನ್ನು ಕಂಡು ಸ್ನಾನವನ್ನು ಮಾಡಿ ಪ್ರತಿಪದೆಯ ಸಂಧ್ಯಾವಂದನೆಯನ್ನು ಮಾಡತಕ್ಕದ್ದು.

ಬುಧವಾರದ ದಿವಸ ದಕ್ಷಿಣಾಯನ ಪರ್ವಕಾಲವೂ ಇದೆ. ಹೀಗಾಗಿ ತರ್ಪಣದ ಅಧಿಕಾರವಿರುವವರು ಬುಧವಾರ ಮಧ್ಯಾಹ್ನ 12-30 ರ ನಂತರ ನದೀ ಮುಂತಾದವುಗಳಲ್ಲಿ ಸ್ನಾನವನ್ನು ಮಾಡಿ, ತಿಲತರ್ಪಣವನ್ನು ನೀಡಿ ಆ ನಂತರ ಊಟ ಮಾಡಬೇಕು.

ಸಾಧ್ಯವಿಲ್ಲದವರು ಮನೆಯಲ್ಲಿಯೇ ಆ ಸಮಯಕ್ಕೆ ಸ್ನಾನ ಮಾಡಿ ತರ್ಪಣವನ್ನು ನೀಡಬೇಕು.

ಅತ್ಯಂತ ಅನಿವಾರ್ಯ ಕಾರ್ಯವಿದ್ದವರು ಆ ದಿವಸ ಬೆಳಿಗ್ಗೆಯೇ ತರ್ಪಣ ನೀಡಿ ಕೆಲಸಕ್ಕೆ ಹೋಗಬಹುದು. ಪೂರ್ಣ ಬಿಡುವದಕ್ಕಿಂತ ಲೇಸು.

ಗ್ರಹಣ ಎನ್ನುವದು ಭಗವಂತನ ಪ್ರೀತಿಯನ್ನು ಸಂಪಾದಿಸಲಿಕ್ಕೆ ಇರುವ ಶ್ರೇಷ್ಠ ಪರ್ವ ಕಾಲ. ಭಗವಚ್ಚಿಂತನೆ, ದಾನ, ಪಾರಾಯಣಗಳಿಂದ ಅದನ್ನು ಸಾರ್ಥಕ ಮಾಡಿಕೊಳ್ಳಬೇಕು. ನಿದ್ರೆ ಮಾಡಿ ವ್ಯರ್ಥ ಮಾಡಿಕೊಳ್ಳಬಾರದು.

ಗ್ರಹಣದ ಕಾಲದ ಅನುಷ್ಠಾನ ಮಂತ್ರಸಿದ್ಧಿಗೆ, ಪಿತೃಗಳ ಪ್ರೀತಿಗೆ ಶ್ರೇಷ್ಠ ಸಮಯ. ಉಪದೇಶ ಪಡೆದಿರುವ ಮಂತ್ರಗಳನ್ನು ಪಠಿಸಿ, ತರ್ಪಣಾದಿಗಳನ್ನು ನೀಡಬೇಕು.

ಗ್ರಹಣದಿಂದ ಉಂಟಾಗಬಹುದಾದ ಸಮಸ್ತ ದುಷ್ಪರಿಣಾಮವನ್ನೂ ಗ್ರಹಗಳ ದಿಕ್ಪಾಲಕರ ಅಂತರ್ಯಾಮಿಯಾದ ಮಧ್ವೇಶ ಶ್ರೀಮನ್-ನರಸಿಂಹ ಪರಿಹರಿಸಲಿ, ಗ್ರಹಣದ ಪರ್ವಕಾಲದಲ್ಲಿ ನಿಮ್ಮಿಂದ ಶ್ರೇಷ್ಠ ಸಾಧನೆ ನಡೆಯಲಿ, ನೀವು ಮಾಡುವ ಎಲ್ಲ ಸತ್ಕರ್ಮಗಳೂ ಶ್ರೀ ಹರಿ ವಾಯು ದೇವತಾ ಗುರುಗಳಿಗೆ ಪ್ರಿಯವಾಗಲಿ ಎಂಬ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

## ಗ್ರಹಣದ ಕುರಿತ ಲೇಖನಗಳ ಲಿಂಕ್

ಈ ಕೆಳಗಿನ ಯಾವುದೇ ಶಬ್ದವನ್ನು ಒತ್ತಿದರೂ ಅದಕ್ಕೆ ಸಂಬಂಧಪಟ್ಟ ಪುಟ ತೆರೆದುಕೊಳ್ಳುತ್ತದೆ.

### ಗ್ರಹಣದ ಅನುಷ್ಠಾನಗಳು

**ಗ್ರಹಣದ ಸಂದರ್ಭದಲ್ಲಿ ಮಾಡಬೇಕಾದ, ಮಾಡಬಾರದ, ಮಾಡಬಹುದಾದ, ಮಾಡಲೇಬೇಕಾದ ಕರ್ಮಗಳ ಕುರಿತ ಚಿಂತನೆ ಇಲ್ಲಿದೆ.**

vishwanandini.com/fullarticle.php?serialnumber=VNA004

— — — — — — — — — — — — — — — — —

### ಅಶೌಚದಲ್ಲಿ ಗ್ರಹಣದ ಆಚರಣೆ

**ಶೂದ್ರರು, ಹಸುಗೂಸುಗಳು, ಉಪನಯನವಾದ ಮಕ್ಕಳು, ಮದುವೆಯಾಗದ ಹೆಣ್ಣುಮಕ್ಕಳು, ರಜಸ್ವಲೆಯರು, ಜಾತಾಶೌಚದವರು, ಮೃತಾಶೌಚದವರು, ತೀವ್ರವಾದ ಖಾಯಿಲೆ ಇರುವವರು, ಪ್ರಯಾಣ ಮಾಡುವವರು ಯಾವ ರೀತಿ ಗ್ರಹಣದ ಆಚರಣೆ ಮಾಡಬೇಕು ಎಂದು ವಿವರಿಸುವ ಲೇಖನ.**

vishwanandini.com/fullarticle.php?serialnumber=VNA271

## ಗ್ರಹಣದ ಸಂಕಲ್ಪ ಮತ್ತು ಸಮರ್ಪಣೆ

**ಗ್ರಹಣಕಾಲದಲ್ಲಿ ಮಾಡುವ ಪಾರಾಯಣ, ಜಪ, ತರ್ಪಣ ಮುಂತಾದ ಸತ್ಕರ್ಮಗಳ ಮೊದಲು ಮಾಡಬೇಕಾದ ಸಂಕಲ್ಪ ಮತ್ತು ನಂತರ ಮಾಡಬೇಕಾದ ಸಮರ್ಪಣೆಯ ಕ್ರಮವನ್ನು ಅರ್ಥಸಹಿತವಾಗಿ ಇಲ್ಲಿ ವಿವರಿಸಲಾಗಿದೆ.**

http://vishwanandini.com/fullarticle.php?serialnumber=VNA270

— — — — — — — — — — — — — — — — — —

## ಗ್ರಹಣಕಾಲದಲ್ಲಿ ದಿಗ್ದೇವತೆಗಳ ಪ್ರಾರ್ಥನೆ

ಗ್ರಹಣಕಾಲದಲ್ಲಿ ಎಂಟೂ ದಿಕ್ಕಿನ ದೇವತೆಗಳಿಗೆ ಪ್ರಾರ್ಥನೆ ಸಲ್ಲಿಸಬೇಕೆಂದು ಶಾಸ್ತ್ರ ವಿಧಿಸುತ್ತದೆ. ಆ ಪ್ರಾರ್ಥನಾಶ್ಲೋಕಗಳು ಮತ್ತು ಅವುಗಳ ಅರ್ಥವಿವರಣೆ ಇಲ್ಲಿದೆ.

**vishwanandini.com/fullarticle.php?serialnumber=VNA005**

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಿಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India
nagendracharya@yahoo.co.in
WhatsApp: 9901 551 491